# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ,ತುಮಕೂರು-572 103☏:0816 - 2255650,2273511 ಫ್ಯಾಕ್ಸ್ : 0816-2270719

ಸಂಖ್ಯೆ:ತು.ವಿ.: ಪ.ವಿ.:ವಿ.ನಿ-03:2018-19/1246 ದಿನಾಂಕ: 14.12.2018

## ಅಧಿಸೂಚನೆ

**ವಿಷಯ:** 2019 ರ ಜನವರಿ ಮಾಹೆಯಲ್ಲಿ ನಡೆಯಲಿರುವ ಸ್ನಾತಕ ದೈಹಿಕ ಶಿಕ್ಷಣ(ಬಿ.ಪಿ.ಇಡಿ) ಪದವಿ ಪ್ರಥಮ ಮತ್ತು ತೃತೀಯ ಸೆಮಿಸ್ಟರ್(ನವೀನ & ಪೂರಕ) ಪರೀಕ್ಷೆಗಳ ಅಂತಿಮ ವೇಳಾಪಟ್ಟಿ, ಪರೀಕ್ಷಾ ಕೇಂದ್ರ ಘೋಷಣೆ ಹಾಗೂ ಪರೀಕ್ಷಾ ಮುಖ್ಯ ಅಧೀಕ್ಷಕರ ನೇಮಕಾತಿ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 13.12.2018

*****

2018-19 ನೇ ಶೈಕ್ಷಣಿಕ ಸಾಲಿನ ಸ್ನಾತಕ ದೈಹಿಕ ಶಿಕ್ಷಣ (ಬಿ.ಪಿ.ಇಡಿ) ಪದವಿಯ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (ನವೀನ & ಪೂರಕ) ಪರೀಕ್ಷೆಗಳು 2019 ರ ಜನವರಿ ಮಾಹೆಯಲ್ಲಿ ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅಂತಿಮ ವೇಳಾಪಟ್ಟಿಯಂತೆ (Annexure-01) ನಡೆಯುತ್ತವೆ. ಸದರಿ ವೇಳಾಪಟ್ಟಿಯನ್ನು ಸಂಬಂಧಿಸಿದ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

ಈ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, **ಶ್ರೀ ಸಿದ್ಧಗಂಗಾ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಸಿದ್ಧಗಂಗಾ ಮಠ, ಕ್ಯಾತ್ಸಂದ್ರ, ತುಮಕೂರು ಈ ಕಾಲೇಜನ್ನು ಪರೀಕ್ಷಾ ಕೇಂದ್ರವನ್ನಾಗಿ ಘೋಷಿಸಲಾಗಿದೆ.** ಮತ್ತು ಈ ಪರೀಕ್ಷಾ ಕೇಂದ್ರಕ್ಕೆ ಸದರಿ ಕಾಲೇಜಿನ **ಪ್ರಾಂಶುಪಾಲರನ್ನು ಪರೀಕ್ಷಾ ಮುಖ್ಯ ಅಧೀಕ್ಷಕರನ್ನಾಗಿ ನೇಮಕಾತಿ ಮಾಡಲಾಗಿದ್ದು**, ಪರೀಕ್ಷಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ತಿಳಿಸಲಾಗಿದೆ.

ಪರೀಕ್ಷಾ ಕಾರ್ಯಗಳಲ್ಲಿ ಏನಾದರೂ ಸಮಸ್ಯೆಗಳು ಉಂಟಾದಲ್ಲಿ ಕೂಡಲೇ **ಉಪಕುಲಸಚಿವರು (ಪರೀಕ್ಷಾಂಗ)- ಮೊ.ಸಂ.**-9481266917, **ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದು.

**ಪರೀಕ್ಷಾ ಮುಖ್ಯ ಅಧೀಕ್ಷಕರುಗಳಿಗೆ (Examination Chief Superintendent) ಸೂಚನೆಗಳು:**

1. ಪರೀಕ್ಷಾ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುವವರು ಪರೀಕ್ಷಾ ದಿನದಂದು ಪರೀಕ್ಷಾ ಸಮಯಕ್ಕಿಂತ **ಅರ್ಧ ಗಂಟೆ** ಮುಂಚಿತವಾಗಿ ಕಾಲೇಜಿಗೆ ಬಂದು ಮೊಹರು ಮಾಡಿದ ಪ್ರಶ್ನೆ ಪತ್ರಿಕೆ ಲಕೋಟೆಯನ್ನು ತಮ್ಮ ಸಮ್ಮುಖದಲ್ಲೇ ತೆರೆದು ಪರೀಕ್ಷಾ ಕೊಠಡಿಗೆ ವಿತರಿಸುವ ವ್ಯವಸ್ಥೆ ಮಾಡಬೇಕು. ಮುಖ್ಯ ಅಧೀಕ್ಷಕರು ಇಲ್ಲದೆ ಇದ್ದಾಗ ಅನಧಿಕೃತವಾಗಿ ಬೇರೆ ಯಾರು ಕೂಡ ಪ್ರಶ್ನೆ ಪತ್ರಿಕೆಗಳ ಲಕೋಟೆಯನ್ನು ತೆರೆಯಬಾರದು.
2. ಯಾವುದೇ ಕಾರಣಕ್ಕೂ ಪರೀಕ್ಷಾ ಅಕ್ರಮಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಮತ್ತು ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವುದು ತಮ್ಮ ಹೊಣೆಗಾರಿಕೆಯಾಗಿರುತ್ತದೆ.
3. Question Paper Codeಗೆ ಅನುಸಾರವಾಗಿ ಉತ್ತರ ಪತ್ರಿಕೆ ಪುಸ್ತಕಗಳನ್ನು Room Superintendent's Invigilation Dairyಯೊಂದಿಗೆ ಪ್ಯಾಕ್ ಮಾಡುವುದು ಹಾಗೂ ಆ ಪ್ಯಾಕ್‌ನ ಮೇಲೆ ದಿನಾಂಕ, ವಿಷಯ, ಕಾಲೇಜಿನ ಕೋಡ್, ಕಾಲೇಜಿನ ಹೆಸರು ಮತ್ತು ವಿಳಾಸ, Question Paper Codeನ್ನು ಹಾಗೂ ಬಂಡಲ್‌ನಲ್ಲಿರುವ ಒಟ್ಟು ಉತ್ತರ ಪತ್ರಿಕೆಗಳ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು.
4. ಪ್ರಶ್ನೆ ಪತ್ರಿಕೆಗಳು ಯಾವ ಕಾರಣಕ್ಕೂ ಪರೀಕ್ಷೆಯ ಸಮಯಕ್ಕಿಂತ ಮುಂಚೆ ಬಹಿರಂಗಗೊಳ್ಳದಂತೆ ಮುಖ್ಯ ಅಧೀಕ್ಷಕರು ಸುರಕ್ಷಿತವಾಗಿ ಸಂರಕ್ಷಿಸುವುದು, ಗೌಪ್ಯತೆ ಕಾಪಾಡುವುದಕ್ಕೆ ಮೊದಲ ಆದ್ಯತೆ ನೀಡಲು ತಿಳಿಸಿದೆ.

(2 ನೇ ಪುಟಕ್ಕೆ)